ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 611 (756) |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀಮತಿ ಭಾರತಿ ಶೆಟ್ಟಿ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 19.09.2022 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಜೀವಿಪರಿಸ್ಥಿತಿ ಮತ್ತು ಪರಿಸರ ಹಾಗೂ ಪ್ರವಾಸೋದ್ಯಮ ಸಚಿವರು. |

| ಕ್ರಮ ಸಂಖ್ಯೆ: | ಪ್ರಶ್ನೆ | ಉತ್ತರ |
|---|---|---|
| ಅ) | ಪರಿಸರ ರಕ್ಷಣೆ ಕುರಿತಂತೆ ಇಲಾಖೆಯು ಯಾವ ಕಾರ್ಯಗಳನ್ನು ಮಾಡಿಕೊಂಡು ಬಂದಿದೆ; ಇವುಗಳಿಗೆ ನಿಗಧಿ ಪಡಿಸಿಕೊಂಡಿರುವ ಮಾನದಂಡಗಳೇನು; ಈ ಮಾನದಂಡಗಳ ಅಧ್ಯಯನದ ಬಗ್ಗೆ ಸರ್ಕಾರದ ಅಭಿಪ್ರಾಯಗಳೇನು; ಸದರಿ ಮಾನದಂಡನೆಗಳಿಂದ ಗುರುತಿಸಿರುವ ವೈಫಲ್ಯದ ಸೂಚ್ಯಾಂಕಗಳೇನು; (ರಾಜ್ಯದ ಸಮಗ್ರ ಮಾಹಿತಿ ಒದಗಿಸುವುದು); | ರಾಜ್ಯದ ಜೀವಿಪರಿಸ್ಥಿತಿ ಮತ್ತು ಪರಿಸರಗಳ ಉನ್ನತೀಕರಣದ ಉದ್ದೇಶದಿಂದ 1981 ರಲ್ಲಿ ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆಯು ಸ್ಥಾಪನೆಗೊಂಡಿದ್ದು, ಪರಿಸರ ರಕ್ಷಣೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಅರಣ್ಯ ಪರಿಸರ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯವು ಕಾಲಕಾಲಕ್ಕೆ ಹೊರಡಿಸುವ ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ ಕಾಯ್ದೆ) 1974, ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ ಕಾಯ್ದೆ) 1981 ಹಾಗೂ ಪರಿಸರ (ಸಂರಕ್ಷಣೆ) ಕಾಯ್ದೆ 1986ರಡಿಯಲ್ಲಿ ಬರುವ ನಿಯಮಗಳನ್ನು ಅನುಷ್ಠಾನಗೊಳಿಸುವ ತನ್ಮೂಲಕ ಕಾರ್ಯ ನಿರ್ವಹಿಸುತ್ತಿದೆ.<br><br>ಈ ಕೆಳಕಂಡ ಸಂಸ್ಥೆಗಳು/ಮಂಡಳಿಗಳು ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆಯ ಅಧೀನದಲ್ಲಿ ಕಾರ್ಯ ನಿರ್ವಹಿಸಿರುತ್ತವೆ.<br><br>I) **ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ:-** ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ರಾಜ್ಯದಲ್ಲಿ ಪರಿಸರ ರಕ್ಷಣೆ ಕುರಿತಾಗಿ ಕೇಂದ್ರ ಸರ್ಕಾರ ರಚಿಸಿರುವ, ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1974 ಹಾಗೂ ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ, 1981ನ್ನು ಅನುಷ್ಠಾನಗೊಳಿಸುತ್ತಿದೆ ಹಾಗೂ ಪರಿಸರ (ಸಂರಕ್ಷಣೆ) ಕಾಯ್ದೆ 1986ರಡಿಯಲ್ಲಿ ಈ ಕೆಳಕಂಡ ನಿಯಮಗಳನ್ನು ಮತ್ತು ಅಧಿಸೂಚನೆಗಳನ್ನು ಅನುಷ್ಠಾನಗೊಳಿಸುವ ಹೊಣೆಯನ್ನು ಅನುಪಾಲಿಸುತ್ತಿದೆ.<br><br>1. ಅಪಾಯಕಾರಿ ಮತ್ತು ಇತರ ತ್ಯಾಜ್ಯಗಳ (ನಿರ್ವಹಣೆ ಮತ್ತು ಅಂತರ ಗಡಿ ಸಂಚಲನೆ) ನಿಯಮಗಳು, 2016<br>2. ಅಪಾಯಕಾರಿ ರಾಸಾಯನಿಕಗಳ ತಯಾರಿಕೆ, ಸಂಗ್ರಹಣೆ ಮತ್ತು ಆಮದು ನಿಯಮ 1989<br>3. ಜೈವಿಕ-ವೈದ್ಯಕೀಯ ತ್ಯಾಜ್ಯ ನಿರ್ವಹಣೆ ನಿಯಮಗಳು 2016<br>4. ಪಾಸ್ಟಿಕ್ ತ್ಯಾಜ್ಯ ನಿರ್ವಹಣೆ ನಿಯಮಗಳು 2016<br>5. ಘನ ತ್ಯಾಜ್ಯ ನಿರ್ವಹಣೆ ನಿಯಮಗಳು 2016<br>6. ಶಬ್ದ ಮಾಲಿನ್ಯ (ಹತೋಟಿ ಮತ್ತು ನಿಯಂತ್ರಣ) ನಿಯಮಗಳು 2000<br>7. ಬ್ಯಾಟರಿಗಳು (ನಿರ್ವಹಣೆ ಮತ್ತು ನಿಭಾವಣೆ) ನಿಯಮಗಳು 2022<br>8. ಅಪಾಯಕಾರಿ ಸೂಕ್ಷ್ಮ ಜೀವಿಗಳು, ತಳೀಯವಾಗಿ ವಿನ್ಯಾಸಿಸಿದ ಏಕಾಣು ಜೀವಿಗಳು ಅಥವಾ ಕೋಶಗಳ (genetically |

engineered organisms or cell) ತಯಾರಿಕೆ, ಉಪಯೋಗ, ಆಮದು, ರಫ್ತು ಮತ್ತು ಸಂಗ್ರಹಣೆ ನಿಯಮಗಳು 1989

9. ವಿದ್ಯುನ್ಮಾನ ತ್ಯಾಜ್ಯ (ನಿರ್ವಹಣೆ) ನಿಯಮಗಳು 2016
10. ನಿರ್ಮಾಣ ಮತ್ತು ಕೆಡಹುವಿಕೆಯ ತ್ಯಾಜ್ಯ ನಿರ್ವಹಣೆ ನಿಯಮಗಳು 2016
11. ಪರಿಸರ ಪ್ರಭಾವದ ಮೌಲ್ಯ ನಿರ್ಧಾರಣ ಅಧಿಸೂಚನೆ 2006
12. ಹಾರು ಬೂದಿ ಅಧಿಸೂಚನೆ 2021

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಮೇಲಿನ ಕಾಯ್ದೆ / ನಿಯಮಗಳಡಿಯಲ್ಲಿ ಉದ್ದಿಮೆಗಳಿಗ/ಸಂಸ್ಥೆಗಳಿಗೆ ಸಮ್ಮತಿ ಪತ್ರ/ಅಧಿಕಾರ ಪತ್ರಗಳನ್ನು ನೀಡುವ ಮುಖೇನ ಮಾಲಿನ್ಯ ನಿಯಂತ್ರಣಕ್ಕೆ ಸಂಬಂಧಿಸಿದ ನಿಬಂಧನೆ /ಷರತ್ತುಗಳನ್ನು ವಿಧಿಸುವ ಮೂಲಕ ಅವುಗಳ ಪಾಲನೆ ಖಾತರಿಪಡಿಸಿಕೊಳ್ಳಲು ನಿಯಮಿತವಾಗಿ ತಪಾಸಣೆ ಹಾಗೂ ಮಾಪನ ಕ್ರಮಗಳನ್ನು ಕೈಗೊಂಡು ಉಲ್ಲಂಘನೆಯಾಗಿದ್ದಲ್ಲಿ, ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತದೆ.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಜಲ ಮತ್ತು ವಾಯು ಕಾಯ್ದೆಯಡಿಯಲ್ಲಿ ನೀಡುವ ಸಮ್ಮತಿ ಪತ್ರದಲ್ಲಿ ನಿಗದಿತ ಮಾನದಂಡಗಳನ್ನು ರೊಚ್ಚು ನೀರು ಸಂಸ್ಕರಣೆಗೆ ಮತ್ತು ಕಲುಷಿತ ನೀರು ಸಂಸ್ಕರಣೆ ಹಾಗೂ ಕೈಗಾರಿಕಾ ವಾಯು ಮಾಲಿನ್ಯ ಹೊರಸೂಸುವಿಕೆಗೆ ಸಂಬಂಧಿಸಿದಂತೆ ಗುಣ ಮಾನಕಗಳನ್ನು ನಿಗಧಿ ಪಡಿಸುತ್ತದೆ. ಸದರಿ ಮಾನದಂಡಗಳನ್ನು ಕೇಂದ್ರ ಸರ್ಕಾರದ ಅರಣ್ಯ ಪರಿಸರ, ಮತ್ತು ಹವಾಮಾನ ಬದಲಾವಣೆ ಮಂತ್ರಾಲಯವು ಮತ್ತು ಕೇಂದ್ರ ಮಾಲಿನ್ಯ ನಿಯಂತ್ರಾಣ ಮಂಡಳಿಯು ಆಗಿಂದಾಗ್ಗೆ ಹೊರಡಿಸುವ ಅಧಿಸೂಚನೆ/ಮಾರ್ಗಸೂಚಿಗಳನ್ನು ಕೈಗಾರಿಕೆಗಳಲ್ಲಿ ಅನುಷ್ಠಾನಗೊಳಿಸಿ ಕಾರ್ಯರೂಪಕ್ಕೆ ತರುವ ಬಗ್ಗೆ ಮಂಡಳಿಯು ಕ್ರಮ ವಹಿಸುತ್ತದೆ.

- ಕರ್ನಾಟಕ ಜೀವ ವೈವಿಧ್ಯ ಮಂಡಳಿ:- ಜೈವಿಕ ಸಂಪನ್ಮೂಲಗಳ ಸಂರಕ್ಷಣೆ, ಅದರ ಘಟಕಗಳ ಸುಸ್ಥಿರಬಳಕೆ ಮತ್ತು ಅನುವಂಶಿಕ ಸಂಪನ್ಮೂಲಗಳ ಉಪಯೋಗದಿಂದ ದೊರೆಯುವ ಲಾಭಾಂಶಗಳ ನ್ಯಾಯ ಸಮ್ಮತ ಹಂಚಿಕೆಯನ್ನು ಖಾತ್ರಿ ಪಡಿಸುವುದಕ್ಕಾಗಿ ಕೇಂದ್ರ ಸರ್ಕಾರದ ಜೀವ ವೈವಿಧ್ಯ ಕಾಯ್ದೆ 2002ರಡಿಯಲ್ಲಿ ರಾಜ್ಯದಲ್ಲಿ ಕರ್ನಾಟಕ ಜೀವ ವೈವಿಧ್ಯ ಮಂಡಳಿಯನ್ನು ಸ್ಥಾಪಿಸಲಾಗಿದೆ ಹಾಗೂ ಕರ್ನಾಟಕ ಜೀವ ವೈವಿಧ್ಯ ನಿಯಮಗಳು, 2005ನ್ನು ದಿನಾಂಕ: 29.01.2006 ರಿಂದ ಜಾರಿಗೆ ತರಲಾಗಿದೆ. ಮಂಡಳಿಯು ಜೈವಿಕ ಸಂಪನ್ಮೂಲಗಳ ವಾಣಿಜ್ಯ ಬಳಕೆ ಅಥವಾ ಜೈವಿಕ ಸಮೀಕ್ಷೆ ಮತ್ತು ಜೈವಿಕ ಬಳಕೆಗಾಗಿ ಭಾರತೀಯರಿಗೆ ಅನುಮೋದನೆಗಳನ್ನು ಅಥವಾ ಮಾಡಿಕೊಂಡ ಇತರ ರೀತಿಯ ಕೋರಿಕೆಗಳನ್ನು ಮಂಜೂರು ಮಾಡುವುದು ಹಾಗೂ ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತಿ ಮಟ್ಟಗಳಲ್ಲಿ ಜೀವವೈವಿಧ್ಯ ನಿರ್ವಹಣಾ ಸಮಿತಿಗಳನ್ನು ರಚಿಸುವುದು, ಜನತಾ ಜೀವವೈವಿಧ್ಯ ದಾಖಲಾತಿಗಳನ್ನು ತಯಾರಿಸುವುದು ಹಾಗೂ ಜೀವ ವೈವಿಧ್ಯತೆಯ ಬಗ್ಗೆ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ.

<table>
<tr>
<td></td>
<td></td>
<td>2) ಕರ್ನಾಟಕ ಪರಿಸರ ಆಘಾತ ಅಂದಾಜೀಕರಣ ಪ್ರಾಧಿಕಾರ:- ಕೇಂದ್ರ ಸರ್ಕಾರದ ಅರಣ್ಯ, ಪರಿಸರ ಮತ್ತು ಹವಮಾನ ಬದಲಾವಣೆ ಮಂತ್ರಾಲಯದ ಅಧಿಸೂಚನೆ ಸಂಖ್ಯೆ: ಎಸ್.ಓ.1533(ಇ), ದಿನಾಂಕ: 14.09.2006ರಲ್ಲಿ ನಮೂದಾಗಿರುವ 'ಬಿ' ವರ್ಗದ ಯೋಜನೆಗಳಿಗೆ ಪರಿಸರ ವಿಮೋಚನಾ ಪತ್ರವನ್ನು (Environment Clearance) ಕರ್ನಾಟಕ ಪರಿಸರ ಆಘಾತ ಅಂದಾಜೀಕರಣ ಪ್ರಾಧಿಕಾರದಿಂದ (SEIAA) ನೀಡಲಾಗುತ್ತಿದ್ದು, ಪ್ರಾಧಿಕಾರದಲ್ಲಿ ಸ್ವೀಕೃತವಾಗುವ ಅರ್ಜಿಗಳನ್ನು ತಾಂತ್ರಿಕವಾಗಿ ರಾಜ್ಯ ಮಟ್ಟದ ತಜ್ಞ ನಿಷ್ಕರ್ಷ ಸಮಿತಿ (SEAC) ಸಮಿತಿಯು ಪರಿಶೀಲಿಸುತ್ತದೆ.<br><br>3) ಕರ್ನಾಟಕ ರಾಜ್ಯ ಕಡಲತೀರ ವಲಯ ನಿಯಂತ್ರಣ ಪ್ರಾಧಿಕಾರ:- ಕಡಲತೀರ ಪರಿಸರವನ್ನು ಸಂರಕ್ಷಿಸುವ ಹಾಗೂ ಭೂಆಧಾರಿತ ಚಟುವಟಿಕೆಗಳು ಜಲಚರ ಪರಿಸರದ ಮೇಲೆ ಉಂಟು ಮಾಡುವ ಪ್ರತಿಕೂಲ ಪರಿಣಾಮಗಳನ್ನು ತಡೆಗಟ್ಟುವ ದೃಷ್ಟಿಯಿಂದ ಕೇಂದ್ರ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯವು ಅಧಿಸೂಚನೆ ಸಂಖ್ಯೆ ಎಸ್.ಓ.114 (ಇ) ದಿನಾಂಕ: 19-02-1991/ ಎಸ್.ಓ. 91 (6) ದಿನಾಂಕ: 06.01.2011ರಂದು ಕಡಲತೀರ ವಲಯ ನಿರ್ವಹಣೆ ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ಸದರಿ ಅಧಿಸೂಚನೆಯನ್ನು ನಿರಸನಗೊಳಿಸಿ ಅಧಿಸೂಚನೆ ಸಂಖ್ಯೆ: ಜಿ.ಎಸ್.ಆರ್.37(ಇ) ದಿನಾಂಕ 18.01.2019 ರಲ್ಲಿ ಕರಾವಳಿ ನಿಯಂತ್ರಣ ವಲಯ ಅಧಿಸೂಚನೆ 2019ನ್ನು ಹೊರಡಿಸಿರುತ್ತದೆ. ಸದರಿ ಅಧಿಸೂಚನೆಯ ಅನುಷ್ಠಾನಕ್ಕಾಗಿ ಕರ್ನಾಟಕ ರಾಜ್ಯ ಕಡಲ ತೀರ ವಲಯ ನಿಯಂತ್ರಣ ಪ್ರಾಧಿಕಾರವನ್ನು ರಚಿಸುವ ತನ್ಮೂಲಕ ಕಡಲ ತೀರ ಸೂಕ್ಷ್ಮ ಪ್ರದೇಶಗಳ ಸಂರಕ್ಷಣೆಯನ್ನು ಕೈಗೊಳ್ಳಲು ಪ್ರಾಧಿಕಾರಕ್ಕೆ ಆಡಳಿತಾತ್ಮಕ ನೆರವನ್ನು ಇಲಾಖೆಯು ನೀಡುತ್ತಿದೆ.</td>
</tr>
<tr>
<td>ಆ)</td>
<td>ಕೆರೆಗಳ ಮಾಲಿನ್ಯ ಕುರಿತಂತೆ ಪರಿಸರ ಇಲಾಖೆಯ ಕರ್ತವ್ಯ ಮತ್ತು ಜವಾಬ್ದಾರಿಗಳೇನು; ಇವುಗಳನ್ನು ಪ್ರಾಮಾಣಿಕವಾಗಿ ನಿರ್ವಹಿಸಲಾಗುತ್ತಿದೆಯೇ; ನಿರ್ವಹಿಸಿದ್ದಲ್ಲಿ, ಅಂಕಿ-ಅಂಶಗಳು ಹಾಗೂ ವಿವಿಧ ಮಾನದಂಡಗಳ ಸಹಿತ ಮಾಹಿತಿ ಒದಗಿಸುವುದು; ಇಲ್ಲದಿದ್ದಲ್ಲಿ ಕಾರಣಗಳೇನು;</td>
<td>ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ರಾಜ್ಯದ 175 ಕೆರೆ/ಸರೋವರಗಳ ನೀರಿನ ಗುಣಮಟ್ಟವನ್ನು ರಾಷ್ಟ್ರೀಯ ನೀರಿನ ಗುಣಮಟ್ಟ ಕಾರ್ಯಕ್ರಮದಡಿ (NWMP) ಮಾಪನ ಮಾಡುತ್ತಿದೆ. ನೀರಿನ ಗುಣಮಟ್ಟದ ವರದಿಗಳನ್ನು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಂತರ್ಜಾಲದಲ್ಲಿ ಪ್ರಕಟಿಸುವ ಮೂಲಕ ಕೆರೆ ನಿರ್ವಹಣೆ/ಮಾಲಿಕತ್ವಕ್ಕೆ ಸಂಬಂಧಪಟ್ಟ ಇಲಾಖೆಗಳಿಗೂ ಸಹ ಕ್ರಮ ವಹಿಸಲು ವರದಿಗಳನ್ನು ಕಳುಹಿಸಲಾಗುತ್ತಿದೆ.<br><br>ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ನದಿಗಳ ಅತ್ಯುತ್ತಮ ಬಳಕೆ ಮತ್ತು ಚಟುವಟಿಕೆಗಳನ್ನಾಧರಿಸಿ ಪ್ರಾಥಮಿಕ ಜಲ ಗುಣಮಟ್ಟದ ಮಾನದಂಡಗಳನ್ನು ರೂಪಿಸಿದೆ.<br><br>ಅದರ ವರ್ಗೀಕರಣ ರೀ ಕೆಳಕಂಡತಿದೆ:<br><br>
<table>
<tr><th>ವರ್ಗ</th><th>ಚಟುವಟಿಕೆಗಳು</th></tr>
<tr><td>ವರ್ಗ "ಎ'</td><td>ಸಾಂಪ್ರದಾಯಿಕವಾಗಿ ಸಂಸ್ಕರಿಸದ ಆದರೆ ಸೋಂಕು ನಿವಾರಣೆ ಮಾಡಿದ ನಂತರದ ಕುಡಿಯುವ ನೀರಿನ ಮೂಲಗಳು</td></tr>
<tr><td>ವರ್ಗ 'ಬಿ</td><td>ಮನೆ ಹೊರಗಿನ ಸ್ನಾನ (ಸಂಘಟಿತ)</td></tr>
</table>
</td>
</tr>
</table>

<table>
<tr>
<td></td>
<td></td>
<td>
<table>
<tr><td>ವರ್ಗ 'ಸಿ'</td><td>ಸಂಸ್ಕರಣೆಯ ನಂತರ ಸೋಂಕು ನಿವಾರಣೆ ಮಾಡಿದ ಕುಡಿಯುವ ನೀರಿನ ಮೂಲಗಳು</td></tr>
<tr><td>ವರ್ಗ 'ಡಿ'</td><td>ವನ್ಯಜೀವಿಗಳು ಮತ್ತು ಮೀನುಗಾರಿಕೆಯ ಪ್ರಸರಣ (Propagation)</td></tr>
<tr><td>ವರ್ಗ 'ಇ'</td><td>ನೀರಾವರಿ, ಕೈಗಾರಿಕಾ ತಂಪುಗೊಳಿಸುವಿಕೆ (Industrial cooling) ನಿಯಂತ್ರಿತ ತ್ಯಾಜ್ಯ ವಿಲೇವಾರಿ</td></tr>
</table>
<ul>
<li>ಕೆರೆಗಳ ಮಾಲಿನ್ಯ ಪ್ರಮುಖವಾಗಿ ಕೈಗಾರಿಕೆಗಳು ಹಾಗೂ ಸ್ಥಳೀಯ ಸಂಸ್ಥೆಗಳಿಂದ ಉತ್ಪತ್ತಿಯಾಗುವ ರೊಚ್ಚು ನೀರು ಹರಿಬಿಡುವುದರಿಂದ ಆಗುವುದು ಕಂಡು ಬಂದಲ್ಲಿ, ಅವುಗಳ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತಿದೆ.</li>
<li>ವಿವಿಧ ಮೂಲಗಳಿಂದ ಉತ್ಪತ್ತಿಯಾಗುವ ರೊಚ್ಚು ನೀರಿನಿಂದ ಆಗುವ ಕೆರೆ ಮಾಲಿನ್ಯವನ್ನು ತಡೆಗಟ್ಟುವ ನಿಟ್ಟಿನಲ್ಲಿ ಸಂಸ್ಕರಣಾ ಘಟಕವನ್ನು ಕಡ್ಡಾಯವಾಗಿ ಸ್ಥಾಪಿಸಲು ವಸತಿ ಸಮುಚ್ಛಯಗಳಿಗೆ/ಸ್ಥಳೀಯ ಸಂಸ್ಥೆಗಳಿಗೆ/ಕೈಗಾರಿಕೆಗಳಿಗೆ ನೋಟೀಸ್ ಜಾರಿ ಮಾಡಿ ಶುದ್ಧೀಕರಣ ಘಟಕವನ್ನು ಅಳವಡಿಸಲು ಕ್ರಮ ವಹಿಸುತ್ತಿದೆ.</li>
<li>ಕೆರೆಗಳ ಮಾಲಿಕತ್ವ ಹೊಂದಿರುವ ಇಲಾಖೆಗಳೊಂದಿಗೆ ಮಂಡಳಿಯು ಸಭೆಗಳನ್ನು ನಡೆಸಿ ಕೆರೆ ಮಾಲಿನ್ಯ ತಡೆಗಟ್ಟುವಲ್ಲಿ ನಿರ್ದೇಶನಗಳನ್ನು ನೀಡಿ ಕ್ರಮ ವಹಿಸುತ್ತಿದೆ.</li>
</ul>
</td>
</tr>
<tr>
<td>ಇ)</td>
<td>ಮಾಲಿನ್ಯತೆಯ ವಿರುದ್ಧ ಯಾವ ಸಂಸ್ಥೆ, ವ್ಯಕ್ತಿ ಹಾಗೂ ಇತರೆಯವರುಗಳ ಮೇಲೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; ಈ ಕ್ರಮಗಳಿಂದ ಆಗಿರುವ ಸಾಧನಗಳೇನು? (ವಿವರ ಒದಗಿಸುವುದು)</td>
<td>
ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ 2021-22ರಲ್ಲಿ ಸಮ್ಮತಿ ಪತ್ರ / ಅಧಿಕಾರ ಪತ್ರದಲ್ಲಿ ವಿಧಿಸಲಾಗಿರುವ ಷರತ್ತು / ನಿಬಂಧನೆಗಳ ಉಲ್ಲಂಘನೆಯಾದ ಉದ್ದಿಮೆ/ ಸಂಸ್ಥೆಗಳಿಗೆ ಮುಚ್ಚುವ ಆದೇಶ ನೀಡಿರುವ ವಿವರಗಳು ಕೆಳಕಂಡಂತಿದೆ.
<table>
<tr><th>ಕಾಯ್ದೆ</th><th>ಷರತ್ತು / ನಿಬಂಧನೆಗಳ ಉಲ್ಲಂಘನೆಯಾದ ಉದ್ದಿಮೆ/ ಸಂಸ್ಥೆಗಳಿಗೆ ಮುಚ್ಚುವ ಆದೇಶ ನೀಡಿರುವ ವಿವರಗಳು</th></tr>
<tr><td>ಜಲ ಕಾಯ್ದೆ ಸೆಕ್ಷನ್ 33(ಎ) ಯಡಿ</td><td>66</td></tr>
<tr><td>ವಾಯು ಕಾಯ್ದೆ ಸೆಕ್ಷನ್ 31(ಎ) ಯಡಿ</td><td>52</td></tr>
<tr><td>ಜಲ ಮತ್ತು ವಾಯು ಕಾಯ್ದೆಗಳಡಿ</td><td>10</td></tr>
<tr><td>ಪರಿಸರ ಸಂರಕ್ಷಣೆ ಕಾಯ್ದೆ</td><td>01</td></tr>
<tr><td>ಒಟ್ಟು</td><td>129</td></tr>
</table>
ಮಾಲಿನ್ಯ ನಿಯಂತ್ರಣ ಕಾಯ್ದೆ ಉಲ್ಲಂಘಿಸಿದ ಒಟ್ಟು 352 ಕೈಗಾರಿಕೆ/ಸಂಸ್ಥೆಗಳ ವಿರುದ್ಧ ಕ್ರಿಮಿನಲ್ ಮೊಕದಮೆ ಹೂಡಲಾಗಿದೆ (ಜಲ ಕಾಯ್ದೆಯಡಿ-194, ವಾಯು ಕಾಯ್ದೆಯಡಿ-124, ಪರಿಸರ (ಸಂರಕ್ಷಣೆ) ಕಾಯ್ದೆಯಡಿ-34). ಸದರಿ ಕ್ರಮದಿಂದ ಉದ್ದಿಮೆಗಳು ಮಾಲಿನ್ಯ ನಿಯಂತ್ರಣ ಕ್ರಮಗಳನ್ನು ಅಳವಡಿಸಿಕೊಂಡು ಮಾಲಿನ್ಯವನ್ನು ಹತೋಟಿಯಲ್ಲಿಡಲು ಸಹಕಾರಿಯಾಗಿದೆ.
</td>
</tr>
</table>

ಸಂಖ್ಯೆ: ಅಪಜೀ 204 ಇಎನ್‌ಜಿ 2022

(ಆನಂದ್ ಸಿಂಗ್)
ಜೀವಿಪರಿಸ್ಥಿತಿ ಮತ್ತು ಪರಿಸರ
ಹಾಗೂ ಪ್ರವಾಸೋದ್ಯಮ ಸಚಿವರು.